ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೇ ಏಪ್ರಿಲ್ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿರುವ ದಸ್ತಾವೇಜುಗಳನ್ನು ಕ್ರಯವಾದ ವಾಸ್ದಾರ್‌ರಾಗಲಿ ಅಥವಾ ಅವರಿಂದ ಕ್ರಯವಾದ ಅಧಿಕಾರ ಪಡದುಕೊಂಡ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್ ರಿಜಿಸ್ಟ್ರಾರ್ರ ಮುಂದೆ ಹಾಜರಾಗಿ ವಾಪಸ್ ತೆಗದುಕೊಂಡು ಹೋಗಬಹುದು, ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾಗುವುದು.

ಆಫೀಸ್ ಹೆಸರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನವಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಮೂಲೂರು	179 1892—93	1 ಮೂಲೂರು ಈಸಬಾದಲ್ಲಿರುವ ವುಸ್ಮಾರ್ಖಾರ್ ಕಂಪೆನಿಗೆ ಕೇರಿದ ವುಸ್ಮಾರ್ಖಾರ್ 2 ಮೇಲ್‌ವಿಷಾರಂ ಖಾದರ್ ಹುಸೇನ್‌ಸಾಬಿ 3 ಅಬ್ದುಲ್‌ಖಾದರ್ ಸಾಬಿ	ಮೇಲ್‌ವಿಷಾರಂ ಅಮಿನುದೀನ್‌ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	800 ರೂಪಾಯಿಗೆ ಸರ್ವೆ ನಿಡಗಳನ್ನು ಕ್ರಯಮಾಡಿರುವದಾಗಿ
	180 1892—93	1 ಮೂಲೂರು ಈಸಬಾದಲ್ಲಿರುವ ವುಸ್ಮಾರ್ಖಾರ್ ಕಂಪೆನಿ ಏಜಂಟ್ ಮೇಲ್‌ವಿಷಾರಂ ಅಮಿನುದೀನ್‌ಸಾಹೆಬರ ಮಗ ಖಾದರ್ ಹುಸೇನ್‌ಸಾಬಿ 2 ವುಸ್ಮಾರ್ಖಾರ್ 3 ಅಬ್ದುಲ್‌ಖಾದರ್‌ಸಾಬಿ	ಮೇಲ್‌ವಿಷಾರಂ ಅಮಿನುದೀನ್‌ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	200 ರೂಪಾಯಿಗೆ ಸರ್ವೆ ಮರಗಳನ್ನು ಕ್ರಯಮಾಡಿರುವದಾಗಿ

ಅಬ್ದುಲ್‌ಅಜೀಜ್,
ಫಾರ್ ರಿಜಿಸ್ಟ್ರಾರ್.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ಮತ್ತು ಪ್ರಸಿದ್ಧ ಪತ್ರಿಕೆ.

ತಾರೀಖು 13ನೇ ಏಪ್ರಿಲ್ 1895.

1. ಜೋಡಿ ಮತ್ತು ಕಾಯಂಗುತ್ತಾ ಬಾಕೀದಾರರಾದ ವೆಂಕಂಭಟ್ಟ ವಗೈರೇರಿಂದ ಬರಬೇಕಾದ ಜಮೀರ್ ಕಂದಾಯದ ಬಾಕಿಗಾಗಿ ಫಾರ್‌ಫಿಟ್ ಮಾಡಲ್ಪಟ್ಟ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲ್‌ದಾರ್ರ ಕಚೇರೀಲಿ 1895ನೇ ಇಸವಿ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟುಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಷದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜ್‌ದಾರನು 1894—95ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ 135—3—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇತಾಗಿರುತ್ತೆ. ಅದು ಜ್ಞಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ಏಳನೆಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕೆಸ್ತ್ಕರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ, ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.